

ತಮ್ಮ ಮದುವೆಗೆ ಕೆ.ಕೆ. ಹಬ್ಬಾರ್ ನೀಡಿದ ಕಲಾಕೃತಿಯನ್ನು ತೋರಿಸುತ್ತಿರುವ ಕ್ಷಮಾ ರಾವ್

ಅಭಿನಯದರ್ಪಣ, ಗೀತ ಗೋವಿಂದ... ಹೀಗೆ ಕಲಿಕೆ ನಿರಂತರವಾಗಿ ಸಾಗಿತ್ತು.

ರುಕ್ಮಿಣಿ ದೇವಿ ಅವರು ಥಿಯಾಸಫಿಸ್ಟ್. ಅಂದರೆ ಎಲ್ಲ ಧರ್ಮಗಳ ಒಳಿತನ್ನು ಸಂಗ್ರಹಿಸಿ ಅದನ್ನು ಅನುಸರಿಸುವವರು. ಅವರಿಗೆ ಅನೇಕ ದೇಶಗಳ ಜ್ಞಾನಿಗಳ ತಜ್ಞರ ಪರಿಚಯವಿತ್ತು. ಅಪಾರವಾದ ಓದಿನ ಜ್ಞಾನವೂ ಇತ್ತು. ನೋಡಲು ಎತ್ತರದ ನಿಲುವಿನ ಆಕರ್ಷಕ ವ್ಯಕ್ತಿತ್ವ. ನೃತ್ಯ ಸಂಗೀತ, ಕಲೆಗೆ ಸಂಬಂಧಿಸಿದಂತೆ ವಿದೇಶದಿಂದ ತಜ್ಞರನ್ನು ಕರೆಸಿ ಕಲಾಕ್ಷೇತ್ರದಲ್ಲಿ ಪಾಠ ಮಾಡಿಸುತ್ತಿದ್ದರು. ಇಟಲಿಯ ಚಂದ್ರ ಕಫೆರೋ ಎಂಬುವರು ಎರಡು ವರ್ಷಗಳ ಕಾಲ ಕಲಾಕ್ಷೇತ್ರದಲ್ಲಿ ನಿಂತು ವಿಶ್ವ ಕಲಾ ಇತಿಹಾಸವನ್ನು ಪಾಠ ಮಾಡಿದ್ದರು. ನನಗೆ ಫುಲ್ ಮಾರ್ಕ್ಸ್ ಕೊಟ್ಟಿದ್ದು ನೆನಪಿದೆ. ‘ಯು ರೋಟ್ ಟೂ ಮಚ್’ ಎಂದು ಹೇಳಿದ್ದರು. ಹೀಗೆ ಪೇಂಟಿಂಗ್‌ನಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಡಿಪ್ಲೊಮಾ ಪಡೆದೆ.

◆ **ನಿಮ್ಮ ಪ್ರೀತಿಯ ನೃತ್ಯ ಪ್ರಸ್ತುತಿ ಯಾವುದು?**

‘ಗೀತಗೋವಿಂದ’ ನೃತ್ಯ ಪ್ರಸ್ತುತಪಡಿಸುವಾಗ ದೊರೆಯುವಷ್ಟು ಆನಂದ ಬೇರೆ ಯಾವುದರಲ್ಲೂ ನನಗೆ ಸಿಗದು. ಚೆನ್ನೈಯಲ್ಲಿ ಎಸ್. ಶಾರದಾ ಅವರು ನನಗೆ ಈ ಬಗ್ಗೆ ವಿವರವಾಗಿ ಪಾಠ ಮಾಡಿದ್ದರು. ಒಂದು ನೃತ್ಯಪ್ರಸ್ತುತಿಯ ಸಂದರ್ಭದಲ್ಲಿ ಸಭೆಯಲ್ಲಿ ಕುಳಿತ ರಸಿಕರು ಮತ್ತು ವೇದಿಕೆಯಲ್ಲಿರುವ ಕಲಾವಿದರ ನಡುವೆ ಒಂದು ಅನುಸಂಧಾನ ಏರ್ಪಡಬೇಕು. ರಸನಿಷ್ಪತ್ತಿಗೆ ಪೂರಕವಾದ ವಾತಾವರಣ ಸೃಷ್ಟಿಯಾದಾಗ ವಿವರಿಸಲಾಗದ ಒಂದು ಆನಂದವು ಕಲಾವಿದರಿಗೆ ಮತ್ತು ರಸಿಕರಿಗೆ ದೊರೆಯುತ್ತದೆ. ಇದು ಸಾಧ್ಯವಾಗಬೇಕಾದರೆ ಆ ಪ್ರಸ್ತುತಿಯಲ್ಲಿ ಕಲಾವಿದರು ಮತ್ತು ಸಭಿಕರ ಸಂಪೂರ್ಣ ತೊಡಗಿಸಿಕೊಳ್ಳುವಿಕೆ ಇರಬೇಕು. ನಿಧಾನವಾಗಿ ಆರಂಭವಾಗುವ ಪ್ರಸ್ತುತಿಯು ಮುಂದುವರೆಯುತ್ತ, ಸಭಿಕರನ್ನು ಜೊತೆಗೆ ಕರೆದೊಯ್ಯುತ್ತ ಒಂದು ಗುಂಗನ್ನು ತಲುಪುತ್ತದೆ. ಈ ಗ್ರಹಿಕೆಗೆ ಸಭಿಕರ ಜ್ಞಾನಮಟ್ಟವೂ ಉನ್ನತ ಸ್ತರದಲ್ಲಿರಬೇಕು. ಹೀಗೆ ರಸಿಕರನ್ನು ರೂಪಿಸುವ